




ದಿನಾಂಕ:01-09-2024 ರಂದು **ಅಮೇರಿಕಾದ ವರ್ಜೀನಿಯಾ** ರಾಜ್ಯದ ರಾಜಧಾನಿಯಾಗಿರುವ **ರಿಚ್ಮಂಡ್** ನಗರದಲ್ಲಿರುವ ನಡೆಯುತ್ತಿರುವ ಪ್ರತಿಷ್ಠಿತ **12ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ** ಭಾಗವಹಿಸಿದ ಸನ್ಮಾನ್ಯ ಸಭಾಪತಿಯವರಾದ **ಶ್ರೀ ಬಸವರಾಜ ಎಸ್.ಹೊರಟ್ಟಿ** ರವರು ನಮ್ಮ **ಮಾತೃ ಭಾಷೆಯಾಗಿರುವ ಕನ್ನಡ ಭಾಷೆಯನ್ನು ಅನ್ನದ ಭಾಷೆಯನ್ನಾಗಿ ಪರಿವರ್ತಿಸಿ ಉದ್ಯೋಗ ಹಾಗೂ ಇತರ ಕಾರಣಗಳಿಗೆ ಕನ್ನಡ ಭಾಷೆಯನ್ನೇ ಪ್ರಧಾನವನ್ನಾಗಿಸುವ ಸವಾಲು ನಮ್ಮ ಮುಂದಿದ್ದು, ಅದನ್ನು ಸಮರ್ಥವಾಗಿ ಎದುರಿಸಲು ನಾವೆಲ್ಲರೂ ಗಂಭೀರ ಚಿಂತನೆ ನಡೆಸಬೇಕಿದೆ ಎಂದು ಕರೆ ನೀಡಿದರು**. ಈ ಸಮ್ಮೇಳನದಲ್ಲಿ ಮಾನ್ಯ ಕೃಷಿ ಸಚಿವರಾದ **ಶ್ರೀ ಎನ್.ಚಲುವರಾಯಸ್ವಾಮಿ**, ಕರ್ನಾಟಕ ರಾಜ್ಯದ ಸಚಿವರು, ಶಾಸಕರು **ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು** ಕನ್ನಡ ನಾಡಿನ ಹಲವು ಪ್ರತಿಷ್ಠಿತ ಧಾರ್ಮಿಕ ಮಠಗಳ ಮಠಾಧೀಶರುಗಳು ಪಾಲ್ಗೊಂಡಿದ್ದರು.